ಓ.ಎಸ್. ನಂ 76/2019 ಸಿ.ಡಬ್ಲ್ಯೂ- 3(ಸಂಗಮೇಶ್ವರ್)

**ಸಾಕ್ಷಿಯನ್ನು ದಿನಾಂಕ 25.02.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ದಿಃ 19.02.2015 ರಂದು ವಾದಿ ರವರು ಬ್ಯಾಂಕ್ ಆಫ್ ಬರೋಡ, ಕರೂರ್ ಮುಖ್ಯ ಕಛೇರಿ ಯಲ್ಲಿ ಖಾತೆಯನ್ನು ತೆರೆಯಲು ನೀಡಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ 18 ಎಂದು, ವಾದಿ ರವರ ಒಂದು ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ 19 ಎಂದು, ವಾದಿ ರವರ ಪೋಸ್ಟ್ ಆಪೀಸ್ ಸೇವಿಂಗ್ಸ್ ಸ್ಕೀಮನ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ 20 ಎಂದು, ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿಸಿ 21 ಎಂದು ಗುರುತಿಸಲಾಯಿತು. ವಾದಿ ರವರ ಬ್ಯಾಂಕ್ ಆಫ್ ಬರೋಡ ಬ್ಯಾಂಕಿನ ಪಾಸ್ ಬುಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿ.ಸಿ.22 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

1. ನಿಸಿ 18 ರಂತೆ ಅರ್ಜಿಯನ್ನು ಸ್ವೀಕರಿಸಿ ಖಾತೆಯನ್ನು ತೆರೆಯಲು ವಾದಿ ರವರ ಚುನಾವಣಾ ಗುರುತಿನ ಚೀಟಿ ಮತ್ತು ಅವರಿಗೆ ಸೇರಿದ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್ ಸ್ಕೀಮನ ದಾಖಲಾತಿ ಯನ್ನು ಸ್ವೀಕರಿಸಿಕೊಂಡಿರುತ್ತೇನೆ. ವಾದಿ ರವರು ಖಾತೆಯನ್ನು ತೆರೆಯುವ ಸಮಯದಲ್ಲಿ ರೂ.500/ಗಳನ್ನು ಠೇವಣಿ ಇಟ್ಟು ನಂತರದಲ್ಲಿ ಯಾವುದೇ ವಾಹಿವಾಟು ಆಗಿರುವುದಿಲ್ಲ ಎಂದರೆ ಸರಿ. ವಾದಿ ರವರು ಖಾತೆಯನ್ನು ತೆಗೆದ ನಂತರ ಯಾವುದೇ ವಹಿವಾಟು ಮಾಡದೆ ಇದ್ದುದ್ದರಿಂದ ಅದನ್ನು ಡೋರ್ಮಂಟ್ ಅಕೌಂಟ್ ಎಂದು ಪರಿಗಣಿಸಿ ಆರ್ ಬಿ ಐ ಗೆ ಮಾಹಿತಿಯನ್ನು ನೀಡಲಾಗಿರುತ್ತದೆ. ವಾದಿ ರವರಿಗೆ ಎನ್ ಮುತ್ತು ಸ್ವಾಮಿ ಅಲಿಯಾಸ್ ಕಾಳಿಯಣ್ಣನ್ ಎಂಬ ಬಗ್ಗೆ ನಾನು ಹಾಜರುಪಡಿಸಿದ ದಾಖಲಾತಿಗಳಂತೆ ಸದರಿ ಹೆಸರಿನಲ್ಲಿ ಖಾತೆಯನ್ನು ತೆರೆಸಿರುವುದಿಲ್ಲ ಎಂದರೆ ಸರಿ. ನಿಸಿ 18 ರಂತೆ ನಮ್ಮ ಬ್ಯಾಂಕ್ ನಲ್ಲಿ

ಖಾತೆಯನ್ನು ತೆರೆಸುವ ಸಮಯದಲ್ಲಿ ಮುತ್ತು ಸ್ವಾಮಿ ಹೆಸರಿನ ಮುಂದೆ ಮತ್ತು ಹಿಂದೆ ಯಾವುದೇ ಇನ್ಸಿಯಲ್ ಇರುವುದಿಲ್ಲ ಎಂದರೆ ಸರಿ. ನಮ್ಮ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ ಗ್ರಾಹಕರಿಗೆ  ಪಾಸ್ ಬುಕ್ಕನ್ನು ನೀಡಲಾಗುತ್ತದೆ ಅದು ಅವರ ಬಳಿಯೇ ಇರುತ್ತದೆ  ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಸಿ 22 ರಂತೆ ವಾದಿ ರವರ ಪಾಸ್ ಬುಕ್ ಅವರ ಬಳಿಯಲ್ಲಿಯೇ ಇರಬೇಕಾಗಿತ್ತು ಎಂದರೆ ಸರಿ.

**ಪಾಟೀ ಸವಾಲು ವಾದಿ ಪರ ವಕಿಲರಿಂದಃ**

1. ನಿ.ಸಿ.22 ರಂತೆ ವಾದಿ ರವರ ಖಾತೆಯ ಪಾಸ್ ಬುಕ್ ನಿಮ್ಮ ಬಳಿ  ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು  ಕೋರ್ಟಿನಿಂದ ನೋಟೀಸ್ ಬಂದಿದ್ದರಿಂದ ಖಾತೆಂದಾರರ  ನಕಲು ಪಾಸ್ ಬುಕ್ಕನ್ನು ನಿ.ಸಿ. 22 ರಂತೆ ಹಾಜರುಪಡಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಾಸ್ ಬುಕ್ಕಿನ  ಆಧಾರ ದಂತೆ ವಾದಿ ರವರು ಖಾತೆಯನ್ನು ದಿಃ 19.02.2015 ರಂದು ತೆರೆಯಲಾಗಿರುತ್ತದೆ ಎಂದರೆ  ಸರಿ. ಸದರಿ ದಾಖಲಾತಿಯಲ್ಲಿ ಖಾತೆದಾರರ ಹೆಸರನ್ನು ಮುತ್ತು ಸ್ವಾಮಿ ಎಂದು ತೋರಿಸಲಾಗಿರುತ್ತದೆ ಎಂದರೆ ಸರಿ. ನಿಸಿ 18 ಅರ್ಜಿಯು ಮುತ್ತು ಸ್ವಾಮಿ ರವರು ಖಾತೆಯನ್ನು ತೆರೆಯು ಸಮಯ ನೀಡಿದಂತಹ ಅರ್ಜಿಯಾಗಿರುತ್ತದೆ ಎಂದರೆ ಸರಿ.  ಸದರಿ ಅರ್ಜಿಯಲ್ಲಿ ವಾದಿ ರವರು ತಂದೆಯ ಹೆಸರನ್ನು ಎನ್ ನೈನಗೌಂಡರ್ ಎಂದು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ "ಎನ್ ಅಥವಾ ಹೆಚ್ " ಬರೆಯಲಾಗಿರುತ್ತದೋ ಎಂದು ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅರ್ಜಿಯಂತೆ ಮುತ್ತು ಸ್ವಾಮಿ ರವರು ಎನ್ ನೈನಗೌಂಡರ್  ರವರ ಮಗ ಎಂದು ದೃಡೀಕರಣ ಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಅರ್ಜಿಯನ್ನು ಪಡೆಯುವ ಸಮಯ ಮುತ್ತು ಸ್ವಾಮಿ ರವರ  ಭಾವಚಿತ್ರವನ್ನು ಸಹ ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿ. ಸದರಿ ಭಾವಚಿತ್ರವನ್ನು ಅರ್ಜಿಗೆ ಅಂಟಿಸಲಾಗಿರುತ್ತದೆ ಎಂದರೆ ಸರಿ. ನಿಸಿ 18 ರ 3 ನೇ ಪುಟದಲ್ಲಿ ಇರುವ ವಾದಿ ರವರ ಭಾವ ಚಿತ್ರವನ್ನು ನೋಡಿ ಗುರುತಿಸಲು ಆಗುತ್ತದೆ

ಎಂದರೆ ಸರಿ. ಸದರಿ ಅರ್ಜಿಯಲ್ಲಿರುವ ವ್ಯಕ್ತಿ ಮತ್ತು ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ ವಾದಿ ಇಬ್ಬರೂ ಒಂದೇ ಎಂದರೆ ಸರಿ.

2. ಖಾತೆಯನ್ನು ತೆರೆದಿರುವ ವ್ಯಕ್ತಿ ಮುತ್ತು ಸ್ವಾಮಿ ಬಿನ್ ನೈನಗೌಂಡರ್ ಎಂದು ತೋರಿಸಲು ನಿಸಿ 19 ಮತ್ತು 20 ಅನ್ನು ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲಾತಿಗಳ ಆಧಾರದ ಮೇಲೆ ಮುತ್ತು ಸ್ವಾಮಿ ಬಿನ್ ನೈನಗೌಂಡರ್ ಎಂದು ಖ್ಯಾತ್ರಿ ಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಖಾತೆದಾರರು ವಹಿವಾಟನ್ನು ಮಾಡದೆ ಇದ್ದಾಗ ಅವರ ಖಾತೆಯು ಸ್ಥಗಿತ ಗೊಳ್ಳುತ್ತದೆ ಎಂದರೆ ಸರಿ. ಈ ರೀತಿಯಾಗಿ ಖಾತೆಯನ್ನು ತರೆಸುವುದು ನಮ್ಮ ಬ್ಯಾಂಕಿನಲ್ಲಿ ಸಾಮ್ಯಾನ್ಯವಾಗಿರುತ್ತದೆ ಎಂದರೆ ಸರಿ. ಸ್ಥಗಿತಗೊಂಡ ಬ್ಯಾಂಕಿನ ಖಾತೆಯನ್ನು ಅರ್ಜಿದಾರರು ಪುನಃ ತೆರೆಸಬಹುದು ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಓ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ